ಪ್ರತಿ ಪಂದ್ಯಾವಳಿಗೆ ಪ್ರತಿ ಕ್ರೀಡಾ ಪಟುವಿಗೆ ರೂ. 100.00 ಕ್ರೀಡಾ ಗಂಟು ನೀಡಲಾಗುತ್ತಿದೆ. ಅಲ್ಲದೆ ವೈದ್ಯಕೀಯ ಖರ್ಚು, ಸಾರಿಗೆ ಖರ್ಚನ್ನು ನೀಡಲಾಗುತ್ತಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವ ಕರ್ನಾಟಕ ಕ್ರೀಡಾ ಪಟುಗಳಿಗೆ ಬೆಂಗಳೂರಿನಿಂದ ದೆಹಲಿಯವರೆಗೆ ರೈಲು ವೆಚ್ಚ, ದಹಲಿಯಿಂದ ಪಂದ್ಯಾವಳಿ ನಡೆಯುವ ಸ್ಥಳಕ್ಕೆ ವಿಮಾನ ದರ, ವೀಸಾ, ಏರಪೋರ್ಟ, ಟ್ಯಾಕ್ಸ್ ಖರ್ಚು, ಆಹಾರ ಭತ್ಯೆ, ವಸತಿ ಖರ್ಚುಗಳನ್ನು ನೀಡಲಾಗುತ್ತದೆ. ಕೇಂದ್ರ ಸರ್ಕಾರ ಅಥವಾ ಸಂಬಂಧಿತ ಕ್ರೀಡಾ ಪೆಡರೇಷನ್ ಈ ವೆಚ್ಚಗಳನ್ನು ಭರಿಸದಿದ್ದಾಗ ಮಾತ್ರ ಈ ಸೌಲಭ್ಯಗಳನ್ನು ನೀಡಲಾಗುವುದು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಡಿ. ಮಂಜುನಾಥ : ತಾರೀಖು 20.9.95ರ 26ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 48 ಪ್ರಶ್ನೆಗಳ 41 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಿದ್ದೇನೆ.

ರಾಜ್ಯದಲ್ಲಿರುವ ಸರಕಾರಿ ಡೆಂಟಲ್ ಕಾಲೇಜುಗಳು

2221 - ಶ್ರೀ ಯು.ಜಿ. ಬಣಕಾರ್ (ಹಿರೇಕೆರೂರ್) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಡೆಂಟಲ್ ಕಾಲೇಜುಗಳು ಎಷ್ಟು? ಯಾವುವು?

ಆ) ಬೆಂಗಳೂರಿನಲ್ಲಿರುವ ಸರ್ಕಾರಿ ಡೆಂಟಲ್ ಕಾಲೇಜು ಎಂದು ಪ್ರಾರಂಭಿಸಲಾಯಿತು ಪ್ರಾರಂಭವಾದ ವರ್ಷದಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಇತ್ತು? ಆ ವೇಳೆಯಲ್ಲಿ ಇದ್ದ ಸಿಬ್ಬಂದಿಯ ವಿವರ ಏನು? ಪ್ರಿನ್ಸಿಪಾಲ್, ಪ್ರೊಪೆಸರ್, ಲೆಕ್ಚರರ್, ಅಸಿಸ್ಟೆಂಟ್ ಪ್ರೊಪೆಸರ್, ನರ್ಸ ಹಾಗೂ 'ಡಿ' ವರ್ಗದವರ ವಿವರವನ್ನೊದಗಿಸುವುದು.

ಇ) ಈಗ ಕಾಲೇಜಿನಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ಇದೆ. ಈಗ ಇರುವ ಸಿಬ್ಬಂದಿಯ ವಿವರಗಳನ್ನೊದಗಿಸುವುದು?

ಈ) ಡೆಂಟಲ್ ಕೌನ್ಸಿಲ್ ಇಂಡಿಯಾ ಪ್ರಕಾರ ಈಗ ಸದರಿ ಕಾಲೇಜಿನಲ್ಲಿ ಇರಬೇಕಾಗಿದ್ದ ಸಿಬ್ಬಂದಿ ವರ್ಗವೆಷ್ಟು?

ಉ) ಸದರಿ ಕಾಲೇಜಿನಲ್ಲಿ ಕೊರತೆ ಇರುವ ಸಿಬ್ಬಂದಿಯನ್ನು ಯಾವಾಗ ತುಂಬಲಾಗುವುದು?

ಊ) ಸದರಿ ಕಾಲೇಜನ್ನು ಸ್ವಾಯುತ್ತ ಸಂಸ್ಥೆಯನ್ನಾಗಿ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಒಂದು. ಸರ್ಕಾರಿ ದಂತ ಮಹಾವಿದ್ಯಾಲಯ, ಬೆಂಗಳೂರು.

ಆ) 1958ರಲ್ಲಿ ಪ್ರಾರಂಭವಾಯಿತು.